ಕಥೆ : ರೇವತಿ

ಚಿತ್ರ : ಮಣಿಯಮ್ ಸೆಲ್ವನ್


# ಕೃಷ್ಣನ ಅನುಗ್ರಹವನ್ನು ಪಡೆದುಕೊಂಡ ಸುಲ್ತಾನ




5
ಸುಲ್ತಾನನು ಶ್ರೀಕೃಷ್ಣ ದೇವಸ್ಥಾನದ ಬಾಗಿಲನ್ನು ಕಾಯಲು ಆರಂಭಿಸಿದನು. ನಿಧಾನವಾಗಿ ಶ್ರೀಕೃಷ್ಣನ ಬಗ್ಗೆ ಹೆಚ್ಚು ಹೆಚ್ಚು ವಿಚಾರಗಳನ್ನು ತಿಳಿದುಕೊಂಡನು.
ಕೃಷ್ಣಾ, ನನಗೆ ನಿನ್ನ ದರ್ಶನವಾಗುವುದು ಯಾವಾಗ?
ದಿನದಿನಕ್ಕೆ ಸುಲ್ತಾನನ ಭಕ್ತಿಯು ಬೆಳೆಯುತ್ತ ಹೋಯಿತು. ಅವನು ಶ್ರೀಕೃಷ್ಣನ ದರ್ಶನಕ್ಕಾಗಿ ಹೆಚ್ಚು ಹೆಚ್ಚು ತವಕಪಡಲಾರಂಭಿಸಿದನು.
6
ಕೆಲವು ವರ್ಷಗಳ ನಂತರ,
ರಾಧಾ, ಸುಲ್ತಾನನ ಭಕ್ತಿಯನ್ನು ನೀನು ಗಮನಿಸಿದೆಯೇನು?
ಪ್ರಭೂ, ಅವನು ನಮ್ಮನ್ನು ನೋಡಬೇಕೆಂದು ಬಹಳ ಕುತೂಹಲದಲ್ಲಿದ್ದಾನೆ. ಏಕೆ ಅವನನ್ನು ಇಷ್ಟೊಂದು ಪರೀಕ್ಷಿಸುತ್ತಿರುವೆ?
ಅವನ ಭಕ್ತಿ ಎಲ್ಲರಿಗೂ ತಿಳಿಯುವಂತೆ ಮಾಡೋಣ. ಅವನು ಇಂದು ರಾತ್ರಿ ರಾಸಲೀಲೆಯ ದರ್ಶನವನ್ನು ಹೊಂದುತ್ತಾನೆ.
7
ಇಡೀ ರಾತ್ರಿ ಭಗವಂತನು ಗೋಪಿಯರ ಜೊತೆಗೆ ರಾಸಲೀಲೆಯಾಡಿದನು.
ದೇವಾ! ನೀನು ಈ ರೀತಿ ಸತತವಾಗಿ ನೃತ್ಯಮಾಡಿದರೆ, ನಿನ್ನ ಕಾಲುಗಳಿಗೆ ನೋವುಂಟಾಗ ಲಾರದೇನು? ದಯವಿಟ್ಟು ಸ್ವಲ್ಪ ವಿಶ್ರಾಂತಿ ತೆಗೆದುಕೋ.


8
ನಿಧಾನವಾಗಿ ಬೆಳಗಾಯಿತು. ಸುಲ್ತಾನನು ತನ್ನ ದೈನಂದಿನ ಕರ್ತವ್ಯಗಳಲ್ಲಿ ಮಗ್ನನಾದನು. ಅಷ್ಟುಹೊತ್ತಿಗೆ, ಭಗವಂತನಿಗೆ ಸುಪ್ರಭಾತ ಕೋರಲು, ಭಗವಂತನ ಕೀರ್ತನೆಯನ್ನು ಹಾಡುತ್ತ ಗಾಯಕರು ಬಂದರು.
ಸ್ವಾಮಿ, ದಯವಿಟ್ಟು ಹಾಡುಗಳನ್ನು ಈಗ ಹಾಡಬೇಡಿ. ಆಮೇಲೆ ಹಾಡುವಿರಂತೆ.
ಇಲ್ಲ ಸ್ವಾಮಿ. ಇಡೀ ರಾತ್ರಿ ಭಗವಂತನು ನೃತ್ಯಮಾಡುತ್ತಿದ್ದನು. ಅವನಿಗೆ ಶ್ರಮವಾಗಿದೆ. ಈಗತಾನೇ ಅವನು ನಿದ್ರಿಸಲು ತೆರಳಿದ್ದಾನೆ.
ಕೀರ್ತನೆಯನ್ನು ಮುಂದೂಡಲಾಗದು.
ಈಗಾಗಲೇ ಬೆಳಗಾಗಿದೆ. ಈಗಲ್ಲದೆ ಸುಪ್ರಭಾತದ ಹಾಡುಗಳನ್ನು ಇನ್ನು ಯಾವಾಗ ತಾನೇ ಹಾಡುವುದು?
9
ನೀನು ಏಕೆತಾನೇ ನಮ್ಮನ್ನು ಅಡ್ಡಿಪಡಿಸುತ್ತಿದ್ದೀಯೇ?
ಭಗವಂತನ ನಿದ್ದೆಯನ್ನು ಕೆಡಿಸಬಾರದು. ನಡೆಯಿರಿ, ನಡೆಯಿರಿ.
ಇವನು ದೇವರ ನರ್ತನವನ್ನು ನೋಡಿದನಂತೆ! ಪ್ರಾತಃಕಾಲದ ಪಾರಾಯಣ ನಡೆಯದಿದ್ದರೆ ನಮಗೆ ಪಾಪ ಬರುತ್ತದೆ. ದೇವಸ್ಥಾನದ ಅಧಿಕಾರಿಗಳಿಗೆ ದೂರು ಕೊಡೋಣ.
10
ಸುಲ್ತಾನ, ಈ ಜನರು ಹೇಳುತ್ತಿರುವುದು ನಿಜವೇನು?
ಹೌದು, ಸ್ವಾಮಿ. ಭಗವಂತನು ನನಗೆ ದರ್ಶನವನ್ನು ಕೊಟ್ಟನು. ಈಗತಾನೇ ಅವನು ವಿಶ್ರಾಂತಿಗೆ ಹೋಗಿದ್ದಾನೆ. ಅವನನ್ನು ಯಾವಕಾರಣಕ್ಕೂ ನಾನು ಎಬ್ಬಿಸುವುದಿಲ್ಲ.
ಸುಳ್ಳು, ಸುಳ್ಳು.
ದಯವಿಟ್ಟು ನನ್ನನ್ನು ನಂಬಿ. ಭಗವಂತನು ನರ್ತನ ಮಾಡುತ್ತಿದ್ದಾಗ, ಅವನ ಕಾಲಿನ ಬಳೆಗಳು ಮತ್ತು ಗೆಜ್ಜೆಗಳು ಸಡಿಲವಾದುವು. ಅವು ಇಲ್ಲಿವೆ.
ಹೌದು. ಇವು ಭಗವಂತನ ಆಭರಣಗಳೇ ಸರಿ. ನೋಡಿ. ಅವುಗಳು ಮರಳಿನಿಂದ ಕೊಳೆಯಾಗಿವೆ.
11
ಅಷ್ಟುಹೊತ್ತಿಗೆ ಪೂಜಾರಿ ತವಕದಿಂದ ಪ್ರವೇಶಿಸಿದನು.
ನೋಡಿ, ಇವೇಯೇನು?
ಸ್ವಾಮಿ, ಭಗವಂತನ ವಿಗ್ರಹದ ಕಾಲ್ಗೆಜ್ಜೆ ಮತ್ತು ಬಳೆಗಳು ಕಾಣೆಯಾಗಿವೆ.
ಹೌದು, ಇವು ಭಗವಂತನಿಗೆ ಸೇರಿದ್ದು.

12 ಭಗವಂತನ ಅನುಗ್ರಹದಿಂದ, ಅಧಿಕಾರಿಗಳಿಂದ ಮೊದಲುಗೊಂಡು ಎಲ್ಲರೂ ಸುಲ್ತಾನನ ಮಾತನ್ನು ನಂಬಿದರು.




ಸುಲ್ತಾನನ ಭಕ್ತಿಯ ಕೀರ್ತಿ ರಾಜ್ಯದಾದ್ಯಂತ ಹರಡಿತು. ರಾಜರು ಮತ್ತು ಸಾಮಾನ್ಯ ಜನರು ಸುಲ್ತಾನನ ದರ್ಶನಕ್ಕಾಗಿ ಮುತ್ತಿದರು.

13 ಆದರೆ ಸುಲ್ತಾನನು ಇದರಿಂದ ಗರ್ವಗೊಳ್ಳದೆ, ಭಗವಂತನನ್ನು ಪ್ರಾರ್ಥಿಸುತ್ತಲೇ ಇದ್ದನು.

